International Journal of Kannada Research
www.kannadajournal.com

ISSN: 2454–5813
IJSR 2017; 3(2): 30-33
© 2017 IJKS
www.kannadajournal.com
Received: 08-02-2017
Accepted: 09-03-2017

**ಹರೀಶ್ ಕುಮಾರ್**
ಸಂಶೋಧನವಿದ್ಯಾರ್ಥಿ,
ಮೈಸೂರು ವಿ.ವಿ.

**ಮಾರ್ಗದರ್ಶಕರು**
ಡಾ. ಎಂ. ಶಂಕರ
ಸಹಪ್ರಾಧ್ಯಾಪಕರು
ಮೈಸೂರು ವಿ.ವಿ.

**Correspondence**
ಡಾ.ಎಂ.ಶಂಕರ, ಸಹಪ್ರಾಧ್ಯಾಪಕರು
ಹೇಮಗಂಗೋತ್ರಿ, ಹಾಸನ

# ಇತ್ತೀಚಿನ ಕನ್ನಡ ಮುಸ್ಲಿಂ ಕಥನ ಸಾಹಿತ್ಯ ಮತ್ತು ಬೊಳುವಾರರು

**ಹರೀಶ್ ಕುಮಾರ್, ಸಂಶೋಧನವಿದ್ಯಾರ್ಥಿ**

ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಈ ನಾಡಿನಲ್ಲಿ ಜೀವಿಸಿದ ಎಲ್ಲಾ ಧರ್ಮೀಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮುಸಲ್ಮಾನರಿಗಿಂತ ತಡವಾಗಿ ಈ ನಾಡಿಗೆ ಬಂದ ಕ್ರಿಶ್ಚಿಯನ್ನರು ಧರ್ಮ ಪ್ರಚಾರದ ಸಲುವಾಗಿಯಾದರೂ ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಿದರು. ಆದರೆ ಸುಮಾರು 800 ವರ್ಷಗಳಿಗಿಂತ ಹಿಂದಿನಿಂದಲೂ ಇಲ್ಲಿಯೇ ಹುಟ್ಟಿ ಬೆಳೆದ ಮುಸನ್ಮಾನರು ಕನ್ನಡದಲ್ಲಿ ಸಾಹಿತ್ಯ ರಚನೆಗೆ ತೊಡಗಿದ್ದು ತುಂಬಾ ತಡವಾಗಿ. ಲಭ್ಯ ಮಾಹಿತಿಗಳ ಪ್ರಕಾರ ತತ್ತ್ವಪದಕಾರ ಚನ್ನೂರ ಜಲಾಲಸಾಬ್(1770-1850) ಮತ್ತು ಶಿಶುನಾಳ ಷರೀಫರೇ (1818-1889) ಕನ್ನಡ ಮುಸ್ಲಿಂ ಸಾಹಿತ್ಯದ ಆದ್ಯ ಬರಹಗಾರರು.ಇದಕ್ಕೂ ಪೂರ್ವದಲ್ಲಿ ಜನಪದ ಕವಿಗಳು ಉರ್ದು ಹಾಗೂ ಕನ್ನಡವನ್ನು ಬೆರೆಸಿ ಕೆಲವು ಮೊಹರಂ ಪದ, ಸವಾಲ್ ಜವಾಬ್‌ಪದ, ಲಾವಣಿಗಳನ್ನು ಕಟ್ಟಿ ಹಾಡಿದ್ದಾರೆ. ಡಾ. ಎಂ. ಎಸ್. ಶೇಖರ್ ಅವರು ಕನ್ನಡ ಮುಸ್ಲಿಂ ಜನಪದ ಕಥೆಗಾರರನ್ನು ಗುರುತಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಬರಹಗಾರರಾದ ಎಸ್.ಕೆ. ಕರೀಂಖಾನ್, ಕೆ.ಎಸ್. ನಿಸಾರ್ ಅಹಮದ್, ಅಬ್ದುಲ್ ಮಜೀದ್‌ಖಾನ್, ರಂಜಾನ್ ದರ್ಗಾ ಕಾವ್ಯ ಪ್ರಕಾರದಲ್ಲಿ ಕೃಷಿ ಮಾಡಿದರು. ಎಂ. ಅಕಬರ ಅಲಿ, ಎಂ. ಜೀವನ ಇವರಿಬ್ಬರು ಕಾದಂಬರಿಗಳನ್ನು ಬರೆದರು. ಕನ್ನಡವು ಹಿಂದೂಗಳ ಭಾಷೆ ಎಂದು ಮುಸಲ್ಮಾನರು ನಿರ್ಣಯಿಸಿದ ಕಾಲದಲ್ಲಿ ಉರ್ದು ಮಾತೃಭಾಷೆಯನ್ನಾಡುವ ಈ ಮುಸ್ಲಿಂ ಸಾಹಿತಿಗಳು ಕನ್ನಡದಲ್ಲಿ ಬರೆದದ್ದು ಒಂದು ದೊಡ್ಡ ಸಂಗತಿ. ಕೆ.ಎಸ್. ನಿಸಾರ್ ಅಹಮ್ಮದ್‌ರವರ ಒಂದೆರೆಡು ಕವನಗಳನ್ನು ಬಿಟ್ಟರೆ ಉಳಿದಂತೆ ಯಾವ ಮುಸ್ಲಿಂ ಬರಹಗಾರರೂ ಮುಸ್ಲಿಂ ಸಂಸ್ಕೃತಿಯನ್ನೂ ಕುರಿತು ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಲಿಲ್ಲ. 1980ರ ವರೆಗಿನ ಕಾದಂಬರಿಗಳಲ್ಲಾಗಲಿ, ಮೊದಲ ಮುಸ್ಲಿಂ ಕಥೆಗಾರ್ತಿ ಮುಮ್ತಾಜ್ ಬೇಗಂ ಅವರ *ಅವ್ಯಕ್ತ* ಕಥಾ ಸಂಕಲನವಾಗಲಿ ಮುಸ್ಲಿಂ ಸಮುದಾಯದ ಬದುಕಿನ ಚಿತ್ರಣಗಳನ್ನು ಕಟ್ಟಿಕೊಡುವುದಿಲ್ಲ. ಕನ್ನಡದಲ್ಲಿ ಮೊದಲಬಾರಿಗೆ ಮುಸ್ಲಿಂ ಸಂಸ್ಕೃತಿಯನ್ನು ಕಥನ ಸಾಹಿತ್ಯದ ಮೂಲಕ ಕಟ್ಟಿ ಕೊಟ್ಟವರು ಬೊಳುವಾರು ಮಹಮ್ಮದ್ ಕುಂಞಿ. ಅವರ ಮೊದಲ ಕಥಾಸಂಕಲನ *ಅತ್ತ ಇತ್ತಗಳ ಸುತ್ತ ಮುತ್ತ* (1979) ದಲ್ಲಿಯೇ ಇದು ಪ್ರಾರಂಭವಾಗಿದೆ. ಬೊಳುವಾರರ ಅನಂತರ ಸಾರಾ ಅಬೂಬಕ್ಕರ್ ಅವರ *ಚಂದ್ರಗಿರಿಯ ತೀರದಲ್ಲಿ* (1989) ಕಾದಂಬರಿ, *ಚಪ್ಪಲಿಗಳು* (1989) ಕಥಾ ಸಂಕಲನ, ಮಹಮ್ಮದ್ ಕಟ್ಪಾಡಿಯವರ *ಸರಕುಗಳು* (1989) ಕಾದಂಬರಿ, *ಗೋರಿ ಕಟ್ಟಿಕೊಂಡವರು* (1981) ಕಥಾ ಸಂಕಲನ, ಬಾನುಮುಷ್ತಾಕರ *ಹೆಜ್ಜೆ ಮೂಡಿದ ಹಾದಿ* (1990) ಕಥಾಸಂಕಲನ, ಅಬ್ದುಲ್ ಮಜೀದ್ ಖಾನ್‌ಅವರ *ಆಳು* (1986) ಕಾದಂಬರಿ, ಅಬ್ಬಾಸ್ ಮೇಲಿನಮನಿಯವರ *ಐವತ್ತು ಕಥೆಗಳು*. ಈ ಎಲ್ಲಾ ಕೃತಿಗಳು ರಚನೆಯಾಗುವ ಮೂಲಕ ಮುಸ್ಲಿಂ ಸಮುದಾಯದ ಬದುಕಿನ ಅನಾವರಣವಾಯಿತು; ಹೊಸ ಸಾಹಿತ್ಯಿಕ ಸಂಚಲನಗಳು ಉಂಟಾದವು. ಬಂಡಾಯ ಸಾಹಿತ್ಯದಿಂದ ದಲಿತ ಸಾಹಿತ್ಯ ಪ್ರತ್ಯೇಕಕೊಂಡು ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಂತೆ ಮುಸ್ಲಿಂ ಸಾಹಿತ್ಯ ಸಂವೇದನೆ ಕೂಡ ಪ್ರತ್ಯೇಕವಾಗಿ ಗುರುತಿಸಿಕೊಂಡಿತು.

ಇಪ್ಪತ್ತನೇ ಶತಮಾನದ ಅಂತ್ಯದವರೆಗೆ ರಚಿತವಾದ ಮುಸ್ಲಿಂ ಬರಹಗಾರರ ಕಥನ ಸಾಹಿತ್ಯದಲ್ಲಿ ಬಹುಮುಖ್ಯವಾಗಿ ಚರ್ಚಿತವಾದ ವಿಷಯ ವಸ್ತುಗಳನ್ನು ಈ ಕೆಳಕಂಡಂತೆ ಗುರುತಿಸಬಹುದು:

1. ತಲಾಕ್(ವಿಚ್ಛೇದನ)
2. ಶಿಕ್ಷಣ ಪದ್ಧತಿ

3. ಶವಸಂಸ್ಕಾರ ಪದ್ಧತಿ
4. ಇಸ್ಲಾಮಿ ಜಮಾತ್ ಕಮಿಟಿ
5. ಬುರ್ಖಾ ಪದ್ಧತಿ
6. ಆಹಾರ ಪದ್ಧತಿ
7. ಇದ್ದತ್(ತಲಾಕಿತ ಮಹಿಳೆ ಅಥವ ಗಂಡಸತ್ತ ನಂತರ ೧೩೦ದಿನಗಳ ಏಕಾತ ಆಚರಣೆ)
8. ಇಸ್ಲಾಂ ಧರ್ಮದ ನಂಬಿಕೆಗಳು, ಹರಕೆಗಳು
9. ಬಹುಪತ್ನಿತ್ವ
10. ಹಜ್ ಯಾತ್ರೆ
11. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ವಂಚನೆ
12. ಪ್ರೇಮ, ಕಾಮ ಮತ್ತು ವಿವಾಹ

ಹೀಗೆ ಒಟ್ಟಾರೆಯಾಗಿ ಮುಸ್ಲಿಂ ಲೇಖಕರು ತಮ್ಮ ಸಮುದಾಯದ ಬದುಕಿನ ಸಾಧಕ–ಬಾಧಕಗಳನ್ನು, ನೋವು–ನಲಿವುಗಳನ್ನು ದಟ್ಟವಾಗಿ ಕಟ್ಟಿಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಅಲ್ಲದವರು ಮುಸ್ಲೀಮರ ಬಗ್ಗೆ ಬರೆದದ್ದು ಇಲ್ಲ ಎನ್ನುವಷ್ಟು ಕಡಿಮೆ. ಕುವಂಪು, ಕಾರಂತ, ಅನಕೃ, ಕುಂ. ವೀರಭದ್ರಪ್ಪ, ವಿಶುಕುಮಾರ್, ಕೆ. ಶಿವರಾಮ ಅವರುಗಳ ಒಂದೆರೆಡು ಕೃತಿಗಳಲ್ಲಿ ಮುಸ್ಲಿಂ ಪಾತ್ರಗಳನ್ನು ಕಾಣಬಹುದು. ಇರುವುದರಲ್ಲಿ ಮುಖ್ಯವೆನಿಸುವ ಮುಸ್ಲಿಂ ಪಾತ್ರಗಳು ಮೂಡಿ ಬಂದಿರುವುದು ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದಲ್ಲಿ. ಆದರೂ ಅವರ ಸಾಹಿತ್ಯ ಕೃತಿಗಳಲ್ಲಿನ ಮುಸ್ಲಿಂ ಪಾತ್ರಗಳಿಗೆ ಸ್ವತಂತ್ರ್ಯ ಅಸ್ತಿತ್ವವಿಲ್ಲ.ಮೂಲಭೂತವಾದಿಗಳ ವಿರೋಧದ ನಡುವೆಯೂ ಹಗ್ಗದ ಮೇಲೆ ನಡೆಯುವವರಂತೆ ತುಂಬಾ ಎಚ್ಚರಿಕೆಯಿಂದ ಧಾರ್ಮಿಕ ಸೂಕ್ಷ್ಮಗಳನ್ನು ಕಟ್ಟಿಕೊಡುವಲ್ಲಿ ಮುಸ್ಲಿಂ ಕಥೆಗಾರರು ಯಶಸ್ವಿಯಾಗಿದ್ದಾರೆ. ಬೊಳುವಾರರಿಂದ ಪ್ರಾರಂಭವಾದ ಮುಸ್ಲಿಂ ಸಂಸ್ಕೃತಿಯ ಸಾಹಿತ್ಯಿಕ ಅಭಿವ್ಯಕ್ತಿ ಇಂದು ಹೆಚ್ಚು ತೀವ್ರವಾಗಿ ಪ್ರವಾಹದೋಪಾದಿಯಲ್ಲಿ ಹರಿದುಬರುತ್ತಿದೆ. ಇಪ್ಪತ್ತೊಂದನೇ ಶತಮಾನದ ಇತ್ತೀಚಿನವರೆಗೆ ಸುಮಾರು ನಲ್ವತ್ತಕ್ಕೂ ಹೆಚ್ಚು ಮುಸ್ಲಿಂ ಬರಹಗಾರಾರು ಕನ್ನಡದಲ್ಲಿ ಸಾಹಿತ್ಯ ರಚನೆಗೆ ತೊಡಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಜಮೀರುಲ್ಲಾ ಷರೀಫ್, ಅಬ್ದುಲ್ ರಶೀದ್, ಬಿ.ಎಂ. ಹನೀಫ್, ಆರೀಫ್‌ರಾಜ, ಕೆ. ಷರೀಫಾ, ಡಿ.ಬಿ. ರಜಿಯಾ ಇವರು ಮುಖ್ಯರಾಗಿದ್ದಾರೆ. ಇವರೆಲ್ಲಾ ಕಾವ್ಯ ಪ್ರಕಾರದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದಾರೆ.ಇಪ್ಪತ್ತೊಂದನೇ ಶತಮಾನದಲ್ಲಿ ಉತ್ತಮ ಕಥನ ಸಾಹಿತ್ಯ ರಚಿಸುತ್ತಿರುವ ಮುಸ್ಲಿಂ ಬರಹಗಾರರೆಂದರೆ ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಸಾಹಿತ್ಯ ರಚನೆ ಪ್ರಾರಂಭಿಸಿದ ಬೊಳುವಾರು ಮಹಮದ್ ಕುಂಞ, ಮುಹಮ್ಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಅಬ್ಬಾಸ್ ಮೇಲಿನ ಮನೆ ಇವರುಗಳೆ. ಇತ್ತೀಚೆಗೆ ಕಾವ್ಯ ಪ್ರಕಾರದಲ್ಲಿ ಸಾಹಿತ್ಯ ರಚನೆಗೆ ತೊಡಗಿದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕಥನಸಾಹಿತ್ಯ ರಚನೆಗೆ ಮುಸ್ಲಿಂ ಬರಹಗಾರರು ತೊಡಗಿಸಿಕೊಂಡಿಲ್ಲ. ನಾಟಕ ಪ್ರಕಾರದಲ್ಲಿ ಸಾಹಿತ್ಯ ರಚನೆ ಮಾಡುತ್ತಿರುವವರು ಇಲ್ಲಾ ಎನ್ನುವಷ್ಟು ಕಡಿಮೆ.

ಈ ಶತಮಾನದ ಇತ್ತೀಚಿನ ವರ್ಷಗಳಲ್ಲಿಯೂ ಉತ್ತಮ ಕಥೆ ಕಾದಂಬರಿಗಳನ್ನು ಬರೆಯುತ್ತಿರುವವರಲ್ಲಿ ಬೊಳುವಾರು ಮಹಮದ್ ಕುಂಞ, ಮುಹಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್ ಬಾನು ಮುಷ್ತಾಕ್ ಹೊಸ ಒಲವುಗಳ ದೃಷ್ಟಿಯಿಂದ ಮುಖ್ಯರಾಗುತ್ತಾರೆ. ಕಟ್ಪಾಡಿಯವರ *ಪಚ್ಚಕುದುರೆ* (2012), ಸಾರಾ ಅವರ *ಸುಮಯ್ಯಾ* (2004) ಹಾಗು *ಗಗನಸಖಿ* (2008) ಕಥಾ ಸಂಕಲನಗಳು. *ಪಂಜರ* (2004), *ಇಳಿಜಾರು* (2011) ಕಾದಂಬರಿಗಳು; ಬೊಳುವಾರರ *ಸ್ವಾತಂತ್ರ್ಯದ ಓಟ* (2012) ಕಾದಂಬರಿ. ಬಾನು ಮುಷ್ತಾಕರ *ಸಫೀರಾ* (2007) ಮತ್ತು *ಬಡವರ ಮಗಳು ಹೆಣ್ಣಲ್ಲ* (2012) ಕಥಾಸಂಕಲನ ಇವುಗಳು ಸಮಕಾಲೀನ ವಸ್ತುವನ್ನು ಒಳಗೊಂಡಿದ್ದು ವಸ್ತು ಮತ್ತು ಆಶಯಗಳ ದೃಷ್ಟಿಗಳಿಂದ ಅವರ ಹಿಂದಿನ ಕೃತಿಗಳಿಗಿಂತ ಭಿನ್ನವಾಗಿವೆ. ಇತ್ತೀಚಿನ ಈ ಬರಹಗಳಲ್ಲಿ ಬಹುಮುಖ್ಯವಾಗಿ ಕಥನ ಸಾಹಿತ್ಯಕ್ಕೆ ಆಯ್ಕೆ ಮಾಡಿಕೊಂಡಿರುವ ಸಮಸ್ಯೆಗಳು ಮತ್ತು ಚರ್ಚಿತ ವಿಷಯಗಳೆಂದರೆ:

1. ಕೋಮುಗಲಭೆ ಮತ್ತು ಕೋಮು ಸೌಹಾರ್ದ
2. ಜೀವ ವಿರೋಧಿ ಕಟ್ಟುಪಾಡುಗಳ ನಿರಾಕರಣೆ
3. ಲಿಂಗಸಮಾನತೆ
4. ಆಧುನಿಕ ಶಿಕ್ಷಣಕ್ಕೆ ಪ್ರೋತ್ಸಾಹ
5. ಬಡತನ.
6. ಪ್ರಕೃತಿ ಕಾಳಜಿ ಮತ್ತು ದೇಶಾಭಿಮಾನ

ಕಟ್ಪಾಡಿಯವರ *ಪಚ್ಚಕುದುರೆ* ಕಥಾಸಂಕಲನದ 'ಅಜರ್ ಎಂಬ ಹುಡುಗ', 'ಹತ್ಯೆ' ಕಥೆಗಳು ಬಹುಮುಖ್ಯವಾಗಿ ಭಾರತೀಯ ಕೋಮು ಭಾವನೆಗಳ ಸೂಕ್ಷ್ಮತೆಯನ್ನು, ಅವುಗಳು ಉಂಟುಮಾಡುವ ದುರಂತಗಳನ್ನು ಕಟ್ಟಿಕೊಡುತ್ತವೆ. ಜೊತೆಗೆ ಕೋಮುಭಾರತವು ಶಾಂತ ಹಾಗೂ ಪ್ರೇಮಭಾರತವಾಗಿ ಪರಿವರ್ತಿತವಾಗಬೇಕೆಂಬ ಆಶಯವನ್ನು ಒಳಗೊಂಡಿವೆ. 'ಗಜಲ್' ಎಂಬ ಕಥೆಯಲ್ಲಿ ಬಡತನವೆಂಬ ಶತ್ರು ಎಷ್ಟು ಅಪಾಯಕಾರಿ ಎಂಬುದನ್ನು ಕಟ್ಟಿಕೊಟ್ಟಿದ್ದಾರೆ. ಉಳಿದ ಕಥೆಗಳು ಲಿಂಗಾಧಾರಿತ ಅಸಮಾನತೆ, ತಲಾಕ್‌ಪದ್ಧತಿ, ಇದ್ದತ್ ಪದ್ಧತಿ ಹಾಗೂ ಜೀವ ವಿರೋಧಿ ನಿಲುವುಗಳನ್ನು ಕುರಿತು ಬೆಳಕು ಚೆಲ್ಲುತ್ತವೆ.

ಸಾರಾ ಅಬೂಬಕ್ಕರ್ ಅವರು ಇಳಿಜಾರು ಕಾದಂಬರಿಯಲ್ಲಿ ಮನುಷ್ಯನ ಕೆಲವು ಕಾಮುಖ ವಿಕೃತಿಗಳು ದುರಂತಗಳಿಗೆ ಹಾದಿಯಾಗುವ ಬಗೆಯನ್ನು ಮುಖ್ಯವಾಗಿ ಕಟ್ಟಿಕೊಟ್ಟಿದ್ದಾರೆ. ಆದರೆ ಆ ಕಾದಂಬರಿಯ ಮುಖ್ಯ ಆಶಯ ಕೋಮು ಸೌಹರ್ದವನ್ನು ಮೂಡಿಸುವುದೇ ಆಗಿದೆ. ಆ ಕಾದಂಬರಿಯಲ್ಲಿ ಹಿಂದೂ ಸ್ತ್ರೀ ಮತ್ತು ಪುರುಷರು ಉರುಸ್‌ನ (ಜಾತ್ರೆ) ವೇಳೆ ದರ್ಗಾದಲ್ಲಿ ದುವಾ(ಪ್ರಾರ್ಥನೆ) ಮಾಡುತ್ತಾರೆ. ಕೋಮುಗಲಭೆ ವೇಳೆ ನಜ್ಮಾಳನ್ನು ಅವಳ ಕಾಲೇಜು ಹಿಂದೂಗೆಳತಿ ಪಾರ್ವತಿ ತಮ್ಮ ಮನೆಯಲ್ಲಿ ಆಶ್ರಯ ನೀಡಿ ರಕ್ಷಿಸುತ್ತಾಳೆ. ಹಿಂಸೆಯ ವೇಳೆ ಕಾಣೆಯಾದ ನಜ್ಮಾಳನ್ನು ಹುಡುಕಿ ಅವರ ಕುಟುಂಬದವರಿಗೆ ಒಪ್ಪಿಸಿದವನು ಹಿಂದೂ ಆಗಿರುವ ಗೋಪಾಲಶೆಟ್ಟಿ. ಹನೀಫ್ ಮತ್ತು ವೈದ್ಯ ಮೋಹನನ ಸ್ನೇಹವು ಕಾಮವನ್ನು ಹಂಚಿಕೊಳ್ಳುವುದರ ಜೊತೆಗೆ ಕೋಮುಗಲಭೆಯ ವೇಳೆ ಪ್ರಾಣ ಹಾನಿಯಾಗುವ ಸಂದರ್ಭ ಬಂದಾಗಲೂ ಅವರ ಸ್ನೇಹ ಸಂಬಂಧ ಗಟ್ಟಿಗೊಳ್ಳುತ್ತದೆ. ಅನಾಥೆಯಾದ ಇಂದುಮತಿಗೆ ಬದುಕನ್ನು ಕೊಡಲು ಮೋಹನ ವಿಫಲನಾಗುತ್ತಾನೆ. ಆಗ ಅವಳ ಕೈಹಿಡಿದವನು ಮುಸಲ್ಮಾನ ಹನೀಫ್. ಈ ಎಲ್ಲಾ ಘಟನೆಗಳು ಕೋಮು ಸೌಹಾರ್ದ, ಸಹಬಾಳ್ವೆಗಳ ಹಿನ್ನೆಲೆಯಲ್ಲಿ ಪ್ರಮುಖವಾಗುತ್ತದೆ. ಸ್ತ್ರೀವಾದಿ ಹಿನ್ನಲೆಯಲ್ಲಿ ಗಮನಿಸಿದಾಗ ಹನೀಫ್ ಮತ್ತು ಮೋಹನ ಇಂದುಮತಿಯೊಂದಿಗೆ ಸಂಬಂಧ ಬೆಳೆಸಿ ತಮ್ಮ ಹೆಂಡತಿಯರಿಗೆ ಮೋಸ ಮಾಡುತ್ತಾರೆ. ಬಡತನ ಇಂದುಮತಿಯು ದೇಹವನ್ನು ಮಾರಿಕೊಳ್ಳುವ ಸ್ಥಿತಿಗೆ ತಳ್ಳುತ್ತದೆ. ಸ್ವಾಭಿಮಾನಿ ರಶೀದಾಳಿಗೆ ಜೀವನದ ಉದ್ದಕ್ಕೂ ಕಣ್ಣೀರೆ. ಅದಕ್ಕೆ ತನ್ನ ಅನರಕ್ಷತೆಯೇ ಕಾರಣ ಎಂದು ತಿಳಿದ ರಶೀದ ತನ್ನ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲಿಚ್ಚಿಸುತ್ತಾಳೆ. ತನ್ನ ಮಗ

ಸಲೀಲ ಮೂಲಭೂತವಾದಿಗಳ ಸಂಪರ್ಕದಲ್ಲಿದ್ದಾನೆ ಎಂದು ತಿಳಿದ ರಶೀದ ಸಲೀಲನಿಗೆ ಮಾಡಿದ ಬೋಧನೆ ಹೀಗಿದೆ: "ಯಾರಿಗೂ ತೊಂದರೆಕೊಡದೆ, ಪ್ರಮಾಣಿಕವಾಗಿ ಸತ್ಯ ಸಂಧತೆಯಿಂದ ಯಾರಿಗೂ ಹೊರೆಯಾಗದೆ ಬದುಕುವುದೇ ಧರ್ಮ."(ಇಳಿಜಾರು-2011,ಪು:೧೫೬) ಎಂಬ ಮಾತು ಅನುಭವದ ಅಂತಃಕರಣದ ಮಾತಾಗಿದೆ. ಬೊಳುವಾರರ *ಸ್ವಾತಂತ್ರ್ಯದ ಓಟ* ಕಾದಂಬಿರಿಯಲ್ಲಿಯೂ ಧರ್ಮವನ್ನು ಈ ಅರ್ಥದಲ್ಲಿಯೇ ಪ್ರತಿಪಾದಿಸುತ್ತಾರೆ.

೨೦೧೨ ರಲ್ಲಿ ಪ್ರಕಟವಾದ ಬೊಳುವಾರರ *ಸ್ವಾತಂತ್ರ್ಯದ ಓಟ* ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ೨೦೧೬ರರ ಕೇದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಈ ಕೃತಿಗೆ ಲಭಿಸಿದೆ. *ಸ್ವಾತಂತ್ರ್ಯದ ಓಟ* ಕೃತಿಯನ್ನುಕುರಿತು ಕಾಮರೂಪಿಯವರು ಹೀಗೆ ಹೇಳಿದ್ದಾರೆ: "ಮನುಷ್ಯನು ಮನುಷ್ಯರಂತೆ ಬದುಕಲಿಕ್ಕೆ ಈ ಧರ್ಮ ದೇವರು ಇವೆಲ್ಲ ಬೇಕೇ ಬೇಕು ಎಂದೇನಿಲ್ಲ ಎಂದು ತಿಳಿದುಕೊಂಡವರ ಎದೆಮುಟ್ಟೆ ಧರ್ಮ, ದೇವರು, ದೇಶ ಎಲ್ಲಾ ನಂಬಿಕೆಗಳಿಗೂ ಬದ್ಧರಾಗಿಯೂ ಎಷ್ಟು ಸುಂದರವಾಗಿ ಬದುಕಬಹುದು ಎಂದು ಸಾಬೀತುಪಡಿಸುವ ಚಿತ್ರವನ್ನು ಮುಂದಿಡುವ ಸ್ವಾತಂತ್ರ್ಯದ ಓಟ ಓದುಗರ ಚಿಂತನೆಗೆ ಹೊಸ ಆಯಾಮವನ್ನು ದಕ್ಕಿಸುತ್ತದೆ. ತತ್ಕಾರಣದಿಂದ ಕನ್ನಡದ ಸಾಹಿತ್ಯದ ಮಹತ್ವದ ಕೃತಿಯಾಗಿಯೂ ಗಮನ ಸೆಳೆಯುತ್ತದೆ. (ಸಾಪ್ತಾಹಿಕ ಪ್ರಭ;5/2/2012- ಪುಟ:5)

*ಸ್ವಾತಂತ್ರ್ಯದ ಓಟ* ಕಾದಂಬರಿಯು 1086 ಪುಟಗಳ ೨೧ನೇ ಶತಮಾನದ ಮಹಾಕಾದಂಬರಿಯಾಗಿದೆ. ಈ ಕೃತಿಯು ಚಾಂದಾಲಿ ಎಂಬ ಯುವಕ ಭಾರತ-ಪಾಕಿಸ್ತಾನ ವಿಭಾಗವಾದ ಸಮುಯದಲ್ಲಿ ಹಿಂದೂ ಹೆಣ್ಣುಮಕ್ಕಳಿಬ್ಬರ ರಕ್ಷಣೆಗೆಂದು ಪಾಕಿಸ್ತಾನದಿಂದ ಭಾರತಕ್ಕೆ ಬಂದು, ಮುತ್ತುಪ್ಪಾಡಿಯಲ್ಲಿ ನೆಲೆಸಿ, ಅಲ್ಲಿಯೇ ಚಾಂದಜ್ಜನಾದ ಬಗೆಯನ್ನು ಚಿತ್ರಿಸುತ್ತದೆ. ೧೯೪೭ರ ಭಾರತ ಪಾಕಿಸ್ತಾನ ವಿಭಜನೆಯ ಸಂದರ್ಭದಿಂದ ಇಲ್ಲಿಯುವರೆಗಿನ ಭಾರತದ ಚಾರಿತ್ರಿಕ ಘಟನೆಗಳು ಪ್ರಸ್ತಾಪವಾಗಿವೆ. ಹಾಗಾಗಿ ಕಾದಂಬರಿಯನ್ನು ಒಂದು ಐತಿಹಾಸಿಕ ಕೃತಿಯಾಗಿ ಅಧ್ಯಯನ ಮಾಡಬಹುದು. ಬೊಳುವಾರರ ವೈಯಕ್ತಿಕ ಬದುಕಿನ ಕೆಲವು ಘಟನೆಗಳು ಸಾಹಿತ್ಯಿಕವಾಗಿ ಅಭಿವ್ಯಕ್ತಗೊಂಡಿದ್ದು ಈ ಕೃತಿಯನ್ನು ಕಾದಂಬರಿರೂಪದ ಆತ್ಮಕಥೆಯಾಗಿಯೂ ಗುರುತಿಸಬಹುದು.ಭಾರತದ ಹಿಂದೂ ಮತ್ತು ಮುಸಲ್ಮಾನರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅನಾವರಣಗೊಳಿಸುವ *ಸ್ವಾತಂತ್ರ್ಯದ ಓಟ* ಕೃತಿಯು ಯಾರಿಗೂ ನೋವನ್ನುಂಟುಮಾಡದೆ, ಅಂತಃಕರಣ ಕೇಂದ್ರಿತ ಸಮನ್ವಯ ದೃಷ್ಟಿಕೋನದಲ್ಲಿ ನಿಂತು ಪರಿಹಾರ ಕಂಡುಕೊಳ್ಳುವ ಆದರ್ಶ ರಾಜ್ಯದ ಪರಿಕಲ್ಪನೆಯನ್ನು ಓದುಗರ ಮುಂದಿರಿಸುತ್ತದೆ.ಬದುಕನ್ನು ಹೀಗೆ ಸಾಗಿಸಬೇಕು! ಭಾರತವೆಂದರೆ ಹೀಗಿರಬೇಕು! ಎನ್ನುವ ಭಾವನೆ ಮೂಡಿಸುವ *ಸ್ವಾತಂತ್ರ್ಯದ ಓಟ* ಕಾದಂಬರಿ ಸಹಬಾಳ್ವೆಯ ಸಂಕೇತವಾಗಿದೆ. ಬೊಳುವಾರರ ಒಟ್ಟು ಸಾಹಿತ್ಯದ ಮೊತ್ತದಂತಿದೆ. ಈ ಕೃತಿಯಲ್ಲಿ ಇದುವರೆಗೆ ಬಂದ ಕನ್ನಡ ಮುಸ್ಲಿಂ ಕಥೆಗಾರರ ಬದಲಾಗುತ್ತಿರುವ ದೃಷ್ಟಿಕೋನವನ್ನು ಗುರುತಿಸಬಹುದಾಗಿದೆ. ಸಮಕಾಲೀನ ಸಂಗತಿಗಳನ್ನು ಒಳಗೊಂಡ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯಿಂದ ಕೂಡಿದ್ದು, ಕೋಮು ಸೌಹಾರ್ದವನ್ನು ಪ್ರತಿಪಾದಿಸುವ ಮಹತ್ವದ ಕೃತಿಯಾಗಿದೆ. ಪ್ರಸ್ತುತ ಇಂತಹ ಕೃತಿಗಳ ಅಗತ್ಯತೆ ಇದೆ.

ಒಟ್ಟಿನಲ್ಲಿ ಇತ್ತೀಚಿನ ಕನ್ನಡ ಮುಸ್ಲಿಂ ಕಥೆಗಾರರು ಮುಸ್ಲಿಂ ಸಂಸ್ಕೃತಿಯ ಅನಾವರಣಕ್ಕೆ ಮಾತ್ರ ತಮ್ಮ ಬರಹಗಳನ್ನು ಸೀಮಿತಗೊಳಿಸಿಲ್ಲ. ಭಿನ್ನ ಕೋಮುಗಳ ನಡುವೆ ಸಾಮರಸ್ಯ ಬೆಸೆಯುವ ನಿಟ್ಟಿನಲ್ಲಿ ಬದಲಾಗುತ್ತಿರುವ ಒಲವುಗಳಿಗನುಸಾರ ಬರೆಯುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಕಳೆದ ಶತಮಾನದಲ್ಲಿ ಸಂಚಲನ ಉಂಟುಮಾಡಿದ *ಚಂದ್ರಗಿರಿಯ ತೀರದಲ್ಲಿ, ಜಿಹಾದ್, ಸರಕುಗಳು* ಕಾದಂಬರಿಗಳು ಸೇರಿದಂತೆ ಇತರ ಕನ್ನಡ ಮುಸ್ಲಿಂ ಕಥೆಗಾರರ ಕಥೆಗಳಲ್ಲಿನ ಸ್ತ್ರೀಪಾತ್ರಗಳು ಅನಕ್ಷರಸ್ತರು, ಶೋಷಿತರು, ಅಸಾಹಯಕರು, ಯಾವುದನ್ನು ಪ್ರಶ್ನಿಸದ ಪ್ರತಿಭಟಿಸದ ಒಪ್ಪಿಗೆ ಇಲ್ಲದಿದ್ದರೂ ಅಪ್ಪುವ ಪಾತ್ರಗಳಾಗಿ ಚಿತ್ರಿತವಾಗಿವೆ. ಹೊಸ ಶತಮಾನದ ಇತ್ತೀಚಿನ ಕೃತಿಗಳಲ್ಲಿ ದಿಟ್ಟತನದ ವಿದ್ಯಾವಂತ ಸ್ತ್ರೀಪಾತ್ರಗಳು ಮೂಡಿಬರುತ್ತಿವೆ. ತಮ್ಮ ಹಕ್ಕುಗಳನ್ನು ಕೇಳುವ, ಎಲ್ಲದನ್ನು ಪ್ರಶ್ನಿಸುವ, ಸ್ವತಂತ್ರವಾಗಿ ಬದುಕುವ ಛಲವಂತ ಪಾತ್ರಗಳು ಕಾಣಸಿಗುತ್ತವೆ. *ಇಳಿಜಾರು* ಕಾದಂಬರಿಯ ರಶೀದಾ ಮತ್ತು ಸುಜಾತ ಪಾತ್ರಗಳು, *ಸ್ವಾತಂತ್ರ್ಯದ ಓಟ* ಕಾದಂಬರಿಯ ಖೈರುನ್ನೀಸ ಮತ್ತು ಚಾಂದಲಿಯ ಮೊಮ್ಮಗಳು ಶಬಾನಾ ಪಾತ್ರಗಳು ಅಂತಹ ಪಾತ್ರಗಳಾಗಿವೆ. ಶಬಾನ ಆಧುನಿಕ ಉನ್ನತ ಶಿಕ್ಷಣ ಪಡೆದ ಸ್ವತಂತ್ರ ಅಸ್ತಿತ್ವ ಹೊಂದಿದ ಪಾತ್ರವಾಗಿದೆ. ಬಾನು ಮುಷ್ತಾಕರ *ಬಡವರ ಮಗಳು ಹೆಣ್ಣಲ್ಲ* (2012) ಕಥಾಸಂಕಲನವು ಸ್ತ್ರಿಶೋಷಣೆಯ ವಿಭಿನ್ನ ನೆಲೆಗಳು, ದೇಶಪ್ರೇಮ ಹಾಗು ಪ್ರಕೃತಿಪ್ರಿಯತೆಗಳನ್ನು ಪ್ರಮುಖ ಕಾಳಜಿಯಾಗಿಸಿಕೊಂಡಿದೆ. ಬಾನು ಮುಷ್ತಾಕರ 'ಕಾಡಿನ ಮಧ್ಯೆ ಬೆಳ್ಳಕ್ಕಿ ಹಾರಿದಂತೆ' ಕಥೆಯಲ್ಲಿ ಶ್ರೀಲಕ್ಷ್ಮಿಯು ಚಾಂದ್ ಪಾಶಾನನ್ನು ಮದುವೆಯಾಗಿ ತನ್ನ ನಂಬಿಕೆ ಆಚರಣೆಗಳನ್ನು ಉಳಿಸಿಕೊಳ್ಳುತ್ತಾಳೆ. ಬೊಳುವಾರರು ಇತ್ತೀಚೆಗೆ *ಓದಿರಿ* ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಅದು ಮಹಮ್ಮದ್ ಪೈಗಂಬರರ ಜೀವನಾಧಾರಿತ ಕನ್ನಡದ ಮೊದಲ ಕಾದಂಬರಿಯಾಗಿದೆ. ಗಾಂಧೀಜಿಯವರ ಜೀವನಾಧಾರಿತ 'ಪಾಪು ಗಾಂಧಿ, ಗಾಂಧಿ ಬಾಪು ಆದ ಬಗೆ' ಎಂಬ ಕೃತಿಯೊಂದನ್ನು ರಚಿಸಿದ್ದಾರೆ. ಆ ಕೃತಿ ಮಕ್ಕಳಸಾಹಿತ್ಯಕ್ಕಾಗಿ ಕೊಡಮಾಡುವ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿದೆ. ಇದೀಗ ಬೊಳುವಾರರು ಅಂಬೇಡ್ಕರ್ ಅವರ ಜೀವನಚರಿತ್ರೆಯನ್ನು ದ್ವಿಪದಿಯಲ್ಲಿ ರಚಿಸುತ್ತಿದ್ದು ಸಾಹಿತ್ಯಿಕ ವಲಯದಲ್ಲಿ ಸಾಕಷ್ಟು ನಿರೀಕ್ಷೆ ಹುಟ್ಟಿಸಿದ್ದಾರೆ. ಸರಳವಾದ ಭಾಷೆ, ಹಾಸ್ಯಮಯ ಶೈಲಿ, ಕುತೂಹಲ ಮೂಡಿಸುವ ರಚನೆ, ಮಾನವೀಯ ಕಾಳಜಿ, ಸಮಕಾಲೀನ ಸಮಸ್ಯೆಗಳಿಗೆ ಸಾಹಿತ್ಯಿಕವಾಗಿ ಸ್ಪಂದಿಸುವುದು ಬೊಳುವಾರರ ವಿಶೇಷತೆಯಾಗಿದೆ. ಹೀಗೆ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಇತ್ತೀಚೆಗಿನ ಬರಹಗಾರರು ಹೊಸ ದೃಷ್ಟಿಯಿಂದ ಹೊಸತರದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಸಂತೋಷಕರ ಸಂಗತಿಯಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದವರು ಅದರಲ್ಲಿಯೂ ಮಹಿಳೆಯರು ಬರವಣಿಗೆಯಲ್ಲಿ ತೊಡಗಿಕೊಳ್ಳುವ ಅವಶ್ಯಕತೆ ಇದೆ. ಇದುವರೆಗಿನ ಮುಸ್ಲಿಂ ಕಥೆಗಾರರ ಪರಿಶ್ರಮ ಸಮಾಜದಲ್ಲಿ ಬದಲಾವಣೆಯ ಗಾಳಿಯನ್ನಂತು ಬೀಸಿದೆ. ಪ್ರಕೃತಿ ವಿಕೋಪಗಳು, ಭಯೋತ್ಪಾದನೆ, ಆಧುನಿಕ ಜಗತ್ತು ಒಡ್ಡುತ್ತಿರುವ ಸವಾಲುಗಳು, ತಲ್ಲಣಗಳು, ಬದಲಾಗುತ್ತಿರುವ ಜೀವನಕ್ರಮ ಇವುಗಳು ಹೊಸಬಗೆಯ ಕಾಳಜಿಯ ಬರಹಗಳಿಗೆ ಕಾರಣವಾಗುತ್ತಿವೆ. ಈ ನಡುವೆ ಬರಹಗಾರರ ಆಲೋಚನೆಯ ಕ್ರಮಗಳು ಬದಲಾಗುತ್ತಿವೆ.

**ಪರಾಮರ್ಶನ ಕೃತಿಗಳು**


1. ಇಸ್ಮಾಯಿಲ್. ಎನ್. *ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ* (2007) ಶಮ ಪ್ರಕಾಶನ, ಮಂಗಳೂರು
2. ಪಕೀರ್ ಮಹಮ್ಮದ್ ಕಟ್ಪಾಡಿ *ಪಚ್ಚಕುದುರೆ*(2012) ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
3. ಬಾನು ಮುಷ್ತಾಕ್ ಹಸೀನಾ ಮತ್ತು ಇತರ ಕತೆಗಳು(2013)

ಅಭಿರುಚಿ ಪ್ರಕಾಶನ, ಮೈಸೂರು

4. ಬೊಳುವಾರು ಮಹಮ್ಮದ್ ಕುಂಞ *ಸ್ವಾತಂತ್ರ್ಯದ ಓಟ*(2012) ಮುತ್ತುಪ್ಪಾಡಿ ಪುಸ್ತಕ ಪ್ರಕಾಶನ. ಬೆಂಗಳೂರು
5. ಸಾ.ರಾ. ಅಬುಬಕ್ಕರ್ *ಸಮಗ್ರ ಕಥೆಗಳು* (2011)ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ,ಗುಲಬರ್ಗಾ
6. ಸಾ.ರಾ. ಅಬೂಬಕ್ಕರ್ *ಇಳಿಜಾರು* (2011)ಚಂದ್ರಗಿರಿ ಪ್ರಕಾಶನ, ಮಂಗಳೂರು ಸಾ.ರಾ. ಅಬುಬಕ್ಕರ್
7. *ಸಾಹಿತ್ಯಕ್ಕೊಂದು ದಾರಿದೀಪ* (2012) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಷರೀಫಾ.
8. *ಮುಸ್ಲಿಂ ಮಹಿಳಾ ಸಂವೇದನೆ* (2011) ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು